ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಸರಕಾರಿ ಪದವಿ ಕಾಲೇಜು.

3045:(4131)

ಶ್ರೀ ಮಹಾಂತೇಶ್ ಎಸ್.ಕೌಜಲಗಿ, (ಬೈಲಹೊಂಗಲ) ಮಾನ್ಯ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸ್ವಾತಂತ್ರ್ಯ ಸಂಗ್ರಾಮದ ಊರಾದ ಹಾಗೂ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ವರ್ಷದ ಸವಿನೆನಪಿಗಾಗಿ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಸರಕಾರಿ ಡಿಗ್ರಿ ಕಾಲೇಜನ್ನು ಪ್ರಾರಂಭಿಸಬೇಕೆಂದು ಮನವಿಗಳು ಬಂದಿವೆಯೇ?

2) ಹಾಗಿದ್ದಲ್ಲಿ, ಈ ಕಾಲೇಜು ಪ್ರಾರಂಭಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿರುವರು?

3) ಮುಖ್ಯಮಂತ್ರಿಗಳು ಬೆಳವಡಿಗೆ ಬಂದಿದ್ದಾಗ ಸ್ವಾತಂತ್ರೊತ್ಸವ ಸವಿನಯ ವರ್ಷ ಆಚರಿಸುವ ನೆನಪಿಗೊಸ್ಕರ ಹಾಗೂ ಐತಿಹಾಸಿಕ ಬೆಳವಡಿ ಮಲ್ಲಮ್ಮನ ಗ್ರಾಮವಾದ ಬೆಳವಡಿಯಲ್ಲಿ ಸರಕಾರಿ ಡಿಗ್ರಿ ಕಾಲೇಜನ್ನು ಪ್ರಾರಂಭಿಸುವುದಾಗಿ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದ್ದು, ಮುಖ್ಯಮಂತ್ರಿಗಳ ಘೋಷಣೆಯ ಪ್ರಕಾರ ಇಲ್ಲಿ ಕೂಡಲೇ ಕಾಲೇಜು ಪ್ರಾರಂಭಿಸಲು ಕ್ರಮ ಕೈಕೊಳ್ಳಲಾಗುವುದೇ?

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಉನ್ನತ ಶಿಕ್ಷಣ ಸಚಿವರು):

1) ಹೌದು.

2) ಸದ್ಯಕ್ಕಿಲ್ಲ.

3) ಇಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳು

3046:(4133)

ಶ್ರೀ ಮಹಾಂತೇಶ್ ಎಸ್.ಕೌಜಲಗಿ (ಬೈಲಹೊಂಗಲ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ 1996-97, 1997-98 ಹಾಗೂ 1998-99ನೇ